ಹೊಸಹೊಳಲು, ಕಿಕ್ಕೇರಿ, ಪಾಂಡವಪುರ, ಮೇಲುಕೋಟೆ, ಮದ್ದೂರು, ಕೊಕ್ಕರೆ ಬೆಳ್ಳೂರು, ಶಿವನಸಮುದ್ರ, ರಾಯಚೂರು, ನಾರದಗುಡ್ಡೆ, ಮಲ್ಲಾಬಾದ್, ಮಾನ್ವಿ, ಕಲ್ಲೂರು, ಕನಕಗಿರಿ, ಕೊಪ್ಪಳ, ಹಟ್ಟಿ, ಮುದಗಲ್, ಜಲದುರ್ಗ, ಮಸ್ಕಿ, ಇಟಗಿ, ಕುಕ್ಕನೂರು, ಗಬ್ಬೂರು, ಗಾಜನೂರು, ಕೂಡ್ಲಿ, ತ್ಯಾವರೆಕೊಪ್ಪ, (ಅರಣ್ಯ ಮೀಸಲು ಪ್ರದೇಶವೂ ಇದೆ) ತೀರ್ಥಹಳ್ಳಿ, ಕಳಲೆದುರ್ಗ, ಅಂಬುತೀರ್ಥ, ಆಗುಂಬೆ, ಮಂಡಗದ್ದೆ ಪಕ್ಷಿಧಾಮ, ಕುಂದಾದ್ರಿ, ಮಾರೀಚ ಮೃಗವದೆ, ಕುಪ್ಪಳ್ಳಿ, ನಗರ, ಹುಮ್ಚ, ಕೊಡಚಾದ್ರಿ, ಭದ್ರಾಮತಿ (ಅರಣ್ಯ ಶ್ರೇಣಿಗಳು) ತೊಗರ್ಸಿ, ಬಳ್ಳಿಗಾವಿ, ಉಡುತಡಿ, ಶಾಂತಿಸಾಗರ, ಚನ್ನಗಿರಿ, ಸಂತೆಬೆನ್ನೂರು, ಸೊರಬ, ಚಂದ್ರಗುತ್ತಿ, ತೀರ್ಥ ರಾಮೇಶ್ವರ, ಸಿದ್ದಗಂಗಾ, ಕೈದಾಳ, ದೇವರಾಯನದುರ್ಗ, ಕೊರಟಗೆರೆ, ಸಿದ್ದರಬೆಟ್ಟ, ತೀತಾ ಜಲಾಶಯ, ಸಿರಾ, ಎಡೆಯೂರು, ಮಾರ್ಕೋನಹಳ್ಳಿ, ಪಾವಗಡ, ಮಧುಗಿರಿ, ಅರಳಗುಪ್ಪೆ, ಗುಬ್ಬಿ, ತುರುವೇಕೆರೆ, ತೀರ್ಥರಾಮಲಿಂಗೇಶ್ವರ ಸ್ವಾಮಿ ವಜ್ರ, ಹಂದನಕೆರೆ, ಕಾರವಾರ, ಕೂರ್ಮಗಡ, ದೇವಗಢ, ದೇವಬಾಗ್, ಉಳವಿ, ರಾಮನಗರ, ಕ್ಯಾಸೆಲ್ ರಾಕ್, ಯಲ್ಲಾಪುರ, ಮಾಗೋಡು ಫಾಲ್ಸ್, ಲಾಲ್‌ಗುಡಿ ಫಾಲ್ಸ್, ಹಳಿಯಾಳ, ದಾಂಡೇಲಿ, ಸಿದ್ದಾಪುರ, ಉಂಚಳ್ಳಿ ಫಾಲ್ಸ್, ಸಿರಸಿ, ಸೋಂಡಾ, ಬನವಾಸಿ ಗೋಕರ್ಣ, ಯಾಣ, ಧಾರೇಶ್ವರ, ಕೊಟಲೆ, ಓಂ ಕಡಲುತೀರ, ಅಂಕೋಲಾ, ಭಟ್ಕಲ್, ಮುರುಡೇಶ್ವರ, ಬಸವರಾಜದುರ್ಗ ಮತ್ತು ಇಡಗುಂಜಿ.

ಶ್ರೀಗಂಧದ ಮರಗಳ ಕಳ್ಳ ಸಾಗಾಣಿಕೆ

2228 (2382) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001-02, 2002-03ನೇ ಸಾಲಿನಲ್ಲಿ ಗಂಧದ ಮರ ಹಾಗೂ ಇನ್ನಿತರ ಬೆಲೆಬಾಳುವ ಮರಗಳ ಕಳ್ಳ ಸಾಗಾಣಿಕೆಯ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಆ) ಈ ಪ್ರಕರಣಗಳ ಸಂಖ್ಯೆ: ಜಿಲ್ಲಾವಾರು ವಿವರಗಳನ್ನು ನೀಡುವುದು;

ಇ) ಮರಗಳನ್ನು ಸಾಗಿಸುವಾಗ ವಶಪಡಿಸಿಕೊಳ್ಳಲಾದ ವಾಹನಗಳ ಸಂಖ್ಯೆ ಎಷ್ಟು;

ಈ) ಕಳ್ಳ ಸಾಗಾಣಿಕೆಯಿಂದ ವಶಪಡಿಸಿಕೊಂಡಿರುವ ಮರಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗುವುದು; (ವಿವರಗಳನ್ನು ನೀಡುವುದು);

ಉ) ಎಷ್ಟು ಜನ ಕಳ್ಳ ಸಾಗಾಣಿಕೆದಾರರಿಗೆ ಇದುವರೆವಿಗೆ ಶಿಕ್ಷೆ ಆಗಿದೆ; (ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ)

	2001-02	2002-03
ಶ್ರೀಗಂಧ	893	638
ಇತರೆ	12865	10108
ಒಟ್ಟು	**13758**	**10746**

ಆ) ಜಿಲ್ಲಾವಾರು ವಿವರಗಳನ್ನು ಅನುಬಂಧ -1ರಲ್ಲಿ ಸಲ್ಲಿಸಲಾಗಿದೆ

ಇ) 1405 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ) ಅರಣ್ಯ ಕಾಯ್ದೆ ಅನ್ವಯ ಕ್ರಮ ಕೈಗೊಂಡು ಕಳ್ಳ ಸಾಗಾಣಿಕೆಯಲ್ಲಿ ವಶಪಡಿಸಿಕೊಂಡ ಮರಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮಾಡಲಾಗುವುದು.

ಶ್ರೀಗಂಧ ಮರಗಳ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಶ್ರೀಗಂಧ ಮರಗಳನ್ನು ನ್ಯಾಯಾಲಯದಲ್ಲಿ ಇತ್ಯರ್ಥವಾದ ನಂತರ ಹರಾಜು ಮಾಡುವ ಮೂಲಕ ಅಥವಾ ಚಿಲ್ಲರೆ ಮಾರಾಟದಲ್ಲಿ ಮಾರಾಟ ಮಾಡಲಾಗುವುದು.

ಊ) ಒಟ್ಟು 6 ಜನರಿಗೆ ಶಿಕ್ಷೆಯಾಗಿದೆ.

ಉಳಿದ ಎಲ್ಲಾ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ನ್ಯಾಯಾಲಯವೂ ನೀಡಿದ ತೀರ್ಪನ್ನು ಅನುಸರಿಸಲಾಗುವುದು.

ಅನುಬಂಧ - 1

ಕ್ರ. ಸಂ.	ಜಿಲ್ಲೆಯ ಹೆಸರು	2001-02		2002-03	
		ಶ್ರೀಗಂಧದ ಮರಗಳು	ಇತರೆ ಬೆಲೆ ಬಾಳುವ ಮರಗಳು	ಶ್ರೀಗಂಧದ ಮರಗಳು	ಇತರೆ ಬೆಲೆ ಬಾಳುವ ಮರಗಳು
1	2	3	4	5	6
1.	ಬೆಂಗಳೂರು (ನಗರ)	59	232	27	158
2.	ಬೆಂಗಳೂರು (ಗ್ರಾ)	20	885	05	37
3.	ಕೋಲಾರ	03	-	08	-
4.	ಬಳ್ಳಾರಿ	-	57	-	57
5.	ಚಿತ್ರದುರ್ಗ	-	11	-	04
6.	ದಾವಣಗೆರೆ	01	274	03	220
7.	ಕೊಪ್ಪಳ	-	01	-	01
8.	ಬೆಳಗಾವಿ	01	374	04	276
9.	ಬಾಗಲಕೋಟೆ	-	02	-	02
10.	ಬಿಜಾಪುರ	-	17	-	07
11.	ಮೈಸೂರು	86	525	47	813
12.	ಮಂಡ್ಯ	12	183	09	182
13.	ಕೊಡಗು	18	239	14	230
14.	ಮಂಗಳೂರು	23	685	10	570
15.	ಉಡುಪಿ	29	1210	17	714
16.	ಶಿವಮೊಗ್ಗ	224	2940	188	2443
17.	ಚಿಕ್ಕಮಗಳೂರು	304	1012	284	1082
18.	ಉತ್ತರ ಕನ್ನಡ	65	2958	64	2312
19.	ಚಾಮರಾಜನಗರ	38	59	54	94
20.	ಹಾಸನ	14	310	16	527

1	2	3	4	5	6
21.	ತುಮಕೂರು	12	351	12	189
22.	ಬೀದರ್	-	30	-	26
23.	ಗುಲ್ಬರ್ಗಾ	-	104	03	115
24.	ರಾಯಚೂರು	-	11	-	07
25.	ಧಾರವಾಡ	02	449	03	330
26.	ಗದಗ್	05	01	03	-
27.	ಹಾವೇರಿ	05	102	07	251
	ಒಟ್ಟು	**893**	**12865**	**638**	**10108**

2002-2003ರಲ್ಲಿ ಸಿ.ಆರ್.ಎಫ್. ನಿಂದ ಬಿಡುಗಡೆಯಾದ ಹಣ

2229 (2383) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಸಿ.ಆರ್. ಎಫ್. ನಿಂದ ರಸ್ತೆಗಳ ದುರಸ್ತಿಗಾಗಿ ಬಿಡುಗಡೆಯಾದ ಹಣ ಎಷ್ಟು; ಈ ರಸ್ತೆಗಳು ಯಾವುವು;

ಆ) ಈ ರಸ್ತೆಗಳನ್ನು ಸಿ.ಆರ್.ಎಫ್. ನ ಪಟ್ಟಿಯಲ್ಲಿ ಸೇರಿಸಲು ಅನುಸರಿಸುತ್ತಿರುವ ಮಾನದಂಡ ಏನು;

ಇ) ಈವರೆಗೂ ಎಷ್ಟು ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ; (ವಿವರಗಳನ್ನು ನೀಡುವುದು)?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) 2002-03ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿಯಡಿ 62 ಕಾಮಗಾರಿಗಳು ರೂ. 3985 ಕೋಟಿಗಳ ಅಂದಾಜು ವೆಚ್ಚದಲ್ಲಿ ಮಂಜೂರಾಗಿರುತ್ತದೆ. ರಸ್ತೆಗಳ ವಿವರಗಳನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ.

ಆ) ಕೇಂದ್ರ ರಸ್ತೆ ನಿಧಿ ಅಡಿ ಕೈಗೊಳ್ಳುವ ರಸ್ತೆಗಳು ಹೆಚ್ಚು ಸಂಚಾರ ದಟ್ಟಣೆಯಿರುವ ರಾಜ್ಯ ಹೆದ್ದಾರಿ ಅಥವಾ ಜಿಲ್ಲಾ ಮುಖ್ಯ ರಸ್ತೆಗಳಾಗಿರಬೇಕು, ಇತರೆ ಜಿಲ್ಲಾ ರಸ್ತೆ ಅಥವಾ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು ಪರಿಗಣಿಸುವುದಿಲ್ಲ. ಯಾವುದೇ ಭೂಸ್ವಾಧೀನ ಸಮಸ್ಯೆ ಇರಬಾರದು. ಬೇರೆ ಯಾವುದೇ ಯೋಜನೆಯಡಿ ತೆಗೆದುಕೊಂಡ ಕಾಮಗಾರಿಯು ದೀರ್ಘಕಾಲ ಸ್ಥಗಿತಗೊಂಡಿದ್ದಲ್ಲಿ ಅಂತಹ ರಸ್ತೆಗಳನ್ನು ಜನಪ್ರತಿನಿಧಿಗಳ ಕೋರಿಕೆ ಮೇರೆಗೆ ಅವಶ್ಯವಿದ್ದಲ್ಲಿ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಈ ಯೋಜನೆಯಡಿ ಪ್ರಸ್ತಾಪಿಸಲಾಗುವುದು.

ಈ) ಈವರೆಗೆ (1999-2000 ರಿಂದ 2002-2003 ರವರೆಗೆ) ಕೇಂದ್ರ ರಸ್ತೆ ನಿಧಿ ಅಡಿ ರಾಜ್ಯಕ್ಕೆ 198 ಕಾಮಗಾರಿಗಳು 164.08 ಕೋಟಿ ರೂ. ಗಳಿಗೆ ಮಂಜೂರಾಗಿದ್ದು, ವಿವರವನ್ನು ಅನುಬಂಧ-ಆ ನಲ್ಲಿ ನೀಡಲಾಗಿದೆ. ಈವರೆಗೆ 85 ಕಾಮಗಾರಿಗಳು ಪೂರ್ಣಗೊಂಡಿವೆ.